

ಸ್ವಯಂಚಾಲಿತ ಕಾರ್ ಚಾಲನೆಯಲ್ಲಿ ನಿಶ್ಚಿಂತಳಾಗಿರುವ ಚಾಲಕಿ

# ಚಾಲಕನಿಲ್ಲದ ಗಾಡಿ.. ಓಡಿಸಿ ನೋಡಿ..

■ ಕಿರಣ್ ಇಜಿಮಾನ್

ತುಂಬಾ ದೂರದ ಪ್ರಯಾಣ, ಕಾರು ಓಡಿಸಿ ಯಾಕೋ ಮೈಯೆಲ್ಲಾ ಸುಸ್ತು.. ಅದರ ಬದಲಿಗೇ ಕಾರ್ ತಾನಾಗೇ ಚಲಿಸುವಂತಿದ್ದರೆ ಎಷ್ಟು ಚೆನ್ನಾಗಿತ್ತು ಅಲ್ಲವೇ? ಎಂದುಕೊಳ್ಳುವವರಿಗೆ ಸಂತಸದ ಸುದ್ದಿ. ಇನ್ನು ಕೆಲವೇ ವರ್ಷಗಳಲ್ಲಿ ಚಾಲಕ ರಹಿತ, ಸ್ವಯಂಚಾಲನೆಯ ಕಾರುಗಳು ರಸ್ತೆಗಿಳಿಯಲಿವೆ. ಹೌದು, ಜಗತ್ತಿನ ಪ್ರತಿಷ್ಠಿತ ಕಾರ್ ತಯಾರಕ ಸಂಸ್ಥೆಗಳು ಈ ಯೋಜನೆಯನ್ನು ಸಾಕಾರಗೊಳಿಸಲು ತುದಿಗಾಲಲ್ಲಿ ನಿಂತು ಪ್ರಯತ್ನಿಸುತ್ತಿವೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದಿನ ದಿನಗಳಲ್ಲಿ ಕಾರುಗಳು ತಾನಾಗೇ ಚಲಿಸಲಿವೆ. ಗೂಗಲ್ ಮತ್ತು ಇತರ ಸಂಸ್ಥೆಗಳು ಈಗಾಗಲೇ ಹಲವು ಕೋಟಿ ವೆಚ್ಚದಲ್ಲಿ ಈ ಸಂಶೋಧನೆಯನ್ನು ಕೈಗೆತ್ತಿಕೊಂಡಿದ್ದು, ಹಲವು ರೀತಿಯ ಪರೀಕ್ಷಾರ್ಥ ಕಾರ್ ಚಾಲನೆ ಮಾಡಿ ಯಶಸ್ವಿಯಾಗಿವೆ.

ಸ್ವಯಂಚಾಲಿತ ಕಾರು ತಯಾರಿಸಲು ಪ್ರಯೋಗಗಳು ನಡೆಯುತ್ತಿರುವುದು ಇದೇ ಮೊದಲೇನಲ್ಲ, ಬದಲಾಗಿ 1950ರಿಂದಲೂ ಹಲವು ಕಾರ್ ಕಂಪೆನಿಗಳು ಪ್ರಯತ್ನಿಸಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಮಾತ್ರ ಕಾರ್ ತಯಾರಿಕೆಯಲ್ಲಿನ ತಂತ್ರಜ್ಞಾನ ಮತ್ತು ಸ್ಪರ್ಧೆ ಇದಕ್ಕೆ ಹೆಚ್ಚು ಒತ್ತು ನೀಡಿವೆ. ಆಡಿ, ಫೋರ್ಡ್, ಫೋಕ್ಸ್‌ವಾಗನ್, ಮರ್ಸಿಡಿಸ್, ವೋಲ್ವೊದಂತಹ ಸಂಸ್ಥೆಗಳು ಈ ಪ್ರಯೋಗಕ್ಕಾಗಿ ವಿಶೇಷ ತಂತ್ರಜ್ಞಾನ ತಯಾರಿಯಲ್ಲಿ ತೊಡಗಿವೆ. ಈಗಾಗಲೇ ಅಮೆರಿಕ ಮತ್ತು ಇಂಗ್ಲೆಂಡ್‌ನಲ್ಲಿ ಹಲವು ಯಶಸ್ವಿ ಪ್ರಯೋಗಗಳು ನಡೆದಿವೆ.

ಗೂಗಲ್ ಮತ್ತು ನೋಕಿಯಾ ಹಿಯರ್ ಮ್ಯಾಪ್, ಜಿಪಿಎಸ್ ಮತ್ತು ರಾಡಾರ್‌ಗಳು, ಸೆನ್ಸರ್, ಕ್ಯಾಮೆರಾವನ್ನು ಈ ತಂತ್ರಜ್ಞಾನಕ್ಕಾಗಿ ಬಳಸಲಾಗಿದೆ. ಲೇಸರ್ ಲೈಟ್ ಮತ್ತು ರಾತ್ರಿಯ ವೇಳೆ ರಸ್ತೆಗಳು ಸ್ಪಷ್ಟವಾಗಿ ಕಾಣಿಸುವಂತಹ ಸುಧಾರಿತ ಕ್ಯಾಮೆರಾ ಕೂಡ ಇದರಲ್ಲಿದೆ. ನಿಯಮಿತ ವೇಗದಲ್ಲಿ ಚಲಿಸುವಂತೆ, ಸೂಚನಾ ಫಲಕಗಳು, ಮನುಷ್ಯರು, ಪ್ರಾಣಿಗಳನ್ನು ಗುರುತಿಸುವಂತೆ ಇವು ಕಾರ್‌ನ ಅಟೋಮ್ಯಾಟಿಕ್ ವ್ಯವಸ್ಥೆಗೆ ನಿರ್ದೇಶನ ನೀಡುತ್ತವೆ. ಹಾಗಾಗಿ ಮನುಷ್ಯರು ಚಲಾಯಿಸುವ ಕಾರಿಗಿಂತ ಹೆಚ್ಚು ಕರಾರುವಾಕ್ಕಾಗಿ ಇವು ಸೂಚನೆಗಳನ್ನು ಪಾಲಿಸುತ್ತವೆ.

ಸದ್ಯ ಈ ಸ್ವಯಂಚಾಲಿತ ಕಾರ್ ಬಳಕೆಗೆ ರಸ್ತೆ ಸುರಕ್ಷತಾ ಮಾನದಂಡ ಮತ್ತು ಸಾರಿಗೆ ಇಲಾಖೆಗಳ ಅನುಮತಿ ಸಿಗಬೇಕಿದೆ.

ಇಷ್ಟಾಗಿಯೂ ಈ ಕಾರುಗಳ ಬಳಕೆಯಲ್ಲಿ ಕೆಲವು ತೊಂದರೆಗಳಿವೆ. ಭಾರಿ ಮಳೆ ಮತ್ತು ದಟ್ಟ ಮಂಜು ಇರುವ ಸಂದರ್ಭದಲ್ಲಿ ಈ ಕಾರ್‌ಗಳ ಸೆನ್ಸರ್ ಮತ್ತು ರಾಡಾರ್ ಸಿಸ್ಟಮ್ ಕಾರ್ಯಾಚರಣೆ ವಿಫಲವಾಗಿದೆ. ಮತ್ತು ಒಳರಸ್ತೆಗಳು (ಶಾರ್ಟ್‌ಕಟ್) ಮತ್ತು ಮ್ಯಾಪ್‌ನಲ್ಲಿ ಲಭ್ಯವಿಲ್ಲದ ಕಚ್ಚಾರಸ್ತೆಗಳಲ್ಲಿ ಇವು ಚಲಿಸುವುದಿಲ್ಲ. ಏನಿದ್ದರೂ ಉಪಗ್ರಹ ಆಧಾರಿತ ನಿರ್ದೇಶನ ಪಡೆದುಕೊಂಡೇ ಸಾಗುತ್ತವೆ. ಹಾಗಾಗಿ ಈ ವ್ಯವಸ್ಥೆ ಇನ್ನಷ್ಟು ಸುಧಾರಿಸಬೇಕಿದೆ.

ಈ ಕಾರುಗಳ ಬಳಕೆ ಒಮ್ಮೆ ಪ್ರಾರಂಭವಾದರೆ ಅಪಘಾತ ಮತ್ತು ಸಾವು–ನೋವಿನ ಪ್ರಮಾಣ ಕಡಿಮೆಯಾಗಬಹುದು, ಟ್ರಾಫಿಕ್ ಸಮಸ್ಯೆಯೂ ಸುಧಾರಿಸಬಹುದು ಎಂಬ ಆಶಾಭಾವ ವಿಜ್ಞಾನಿಗಳದ್ದು. ■

---

ರಸಪ್ರಶ್ನೆ 12

**ಸರಿ ಉತ್ತರ ನೀಡಿದ ಸಾವಿರಾರು ಸ್ಪರ್ಧಿಗಳಲ್ಲಿ ಬಹುಮಾನ ಪಡೆದ ಅದೃಷ್ಟವಂತರು**

1. ಭೀಮಪ್ಪ ಎನ್ ದೊಡ್ಡಮನಿ ಶಹಾಪುರ
2. ಚನ್ನಯ್ಯ ಶರಣಪ್ಪ ಧಾರವಾಡ
3. ಮಾಲತಿ ಪಿ.ರಾವ್ ಬಸವನಗುಡಿ
4. ಜಗದೇವಿ ಎನ್. ಬೆಂಗಳೂರು
5. ಮಂಜುಳಾ ಕುದ್ದುಪದವು ದ.ಕ
6. ಎ.ಆರ್.ಗೋವಿಂದರಾಜು ಬೆಂಗಳೂರು
7. ಪದ್ಮ ಸುರೇಶ್ ಬೆಂಗಳೂರು
8. ಭಾಸ್ಕರ ಭಟ್ಟ ಮಂಗಳೂರು
9. ವಿನೋದ್ ಕುಮಾರ್ ಮೈಸೂರು
10. ಶ್ರೀದೇವಿ ಹರಿಹರ

**ಸರಿ ಉತ್ತರಗಳು**

1. ವಾಜಪೇಯಿ
2. ರೋದನಾ ಗೋಡೆ
3. ಸಿದ್ದಲಿಂಗಯ್ಯ
4. ಗುಜರಾತ್
5. ಜಾಕಿ ಚಾನ್